ಬಂಟ್ವಾಳ ಬ್ಯಾರಿ ಸಾಹಿತ್ಯ ಸಮ್ಮೇಳನ-2 FILE COPY
31/11/99

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್

# ಬ್ಯಾರಿ ಸಮುದಾಯತ್ತೆ ಸಮಸ್ಯೆಜಗ್ ಬ್ಯಾರಿ ಸಾಹಿತ್ಯತ್ತ್‌ಲ್ ಪರಿಹಾರ ಸಾಧ್ಯಮಾ?

- ಕೆ.ಎಂ. ಶರೀಫ್ ಮಿತ್ತಬೈಲ್

ಧ್ಯೇಯ ವಾಕ್ಯ: ಎಲ್ಲಾ ಸಮಸ್ಯೆಜಗ್ ಪರಿಹಾರ ತಂಡೆವನುಂ ಅಲ್ಲಾಹು. ನಂಕ್ ಸಜಕ ಸಮಸ್ಯೆಜ ಎತ್ರ ಅರ್ಥ ಆಯಿರ್, ಆ ಸಮಸ್ಯೆಜಲೆ ಪರಿಹಾರ ಆಕೊನುಗು ಅಲ್ಲಾಹು ಕಾಟಿತರುಂಪೋಲ್ತ್ತೆ ತೆರು ಏದಾಯಿಟ್ಟೆಕ್ಕು? ಅಂಟ್ ಚೊಲ್ರೆ ಒರು ಚಿಂತನೆಮೇ ಈ ಪ್ರಬಂಧತ್ತೆ ಧ್ಯೇಯ.

ಉದ್ದೇಶ: ಬ್ಯಾರಿ ಸಾಹಿತ್ಯತ್ತ್‌ಗ್ ಆದ್‌ರೆದೇ ಆಯೆ ಸಮಸ್ಯೆಜ ಇಕ್ಕುಂಬೊ ಆ ಸಮಸ್ಯೆಜಲೆ ಪರಿಹರಿಕ್ಕಾಂಟ್ ಬ್ಯಾರಿ ಸಮುದಾಯತ್ತೆ ಎಲ್ಲಾ ಸಮಸ್ಯೆಜಲೆ ಪರಿಹಾರ ಆಕೊನುಗು ಸಾಧ್ಯ ಆವಾಂಟ್ ಬರು. ಆಯೆಂಗುಂ, ಒಟ್ಟಾರೆ ಸಾಹಿತ್ಯತ್ತ್‌ಲ್ ಸಮುದಾಯತ್ತೊ ಸಮಸ್ಯೆಜಲೆ ಪರಿಹಾರ ಆಕೊಗು ಸಾಧ್ಯ ಇಲ್ಲಾಂಟ್ ಚೊಲ್ಲೊಗಾವುಲ್ಲೆ. ಒರು ಜನಾಂಗತ್ತ್‌ಗ್ ಸಾಹಿತ್ಯ ರೂಪತ್ತ್‌ಲ್ ಇಲಿಂಞ ಪರಿಶುದ್ಧ ಕುರ್‌ಆನ್ ಈ ದುನಿಯಾವುಲ್ ಉಂಡಾಕಿಯ ಪೋಲ್ತೊ ಬದಲಾವಣೆಜ ಈ ದುನಿಯಾವುಗು ಸಾಹಿತ್ಯತ್ತೆ ಒರು ಬೆಲಿಯ ಇನಾಮುಂಟು ಚೊನ್ನಂಗ್ ತಪ್ಪಿಲ್ಲೆ. ಈ ದಿಕ್ಕ್‌ಲ್ ಬ್ಯಾರಿ ಸಮುದಾಯ ಪಿನ್ನೆ ಬ್ಯಾರಿ ಸಾಹಿತ್ಯತ್ತೆ ಸಮಸ್ಯೆಜಲೆ ಒಟ್ಟೊಟ್ಟಿಗೆ ಪರಿಹಾರ ಆಕೊನುಗು ಸಾಧ್ಯಮಾ? ಅಂಟ್ ಚೊಲ್ರೆ ಮೂಲ ಪ್ರಶ್ನೆಮೇ ಈ ಪ್ರಬಂಧತ್ತೆ ಉದ್ದೇಶ.

ಸಮಸ್ಯೆಜಲೆ ಪಡಿಕ್ಕ್‌ರೆ ಜಟಿಲತೆ: ಬ್ಯಾರಿ ಜನಾಂಗ ನಜಲೆ ದೇಶತ್ತ್ ಜನಸಂಖ್ಯೆಲ್ ಕೊರಂಞ ಸಂಖ್ಯೆಲುಲ್ಲೆ ಮುಸ್ಲಿಮಿಂಜಮೇ ಆಯಿಟ್ಟೆಕ್ಕುಂಬೋ ದೇಶತ್ತ್‌ಲ್ ಮುಸ್ಲಿಮೀಂಕ್ ಎದ್‌ರಾವುರೆ ಎಲ್ಲಾ ಸಮಸ್ಯೆಜ ಈ ಬ್ಯಾರಿ ಜನಾಂಗತ್ತ್‌ಗುಂ ಎದ್‌ರಾವುರು.

ಇಜನೆ ಇನ್ನಂಗುಂ, ಬ್ಯಾರಿ ಜನಾಂಗ ಚೊಮ್ಮೆ ನಮುನ್ನೆ ತಂಡದೇ ಆಯೆ ಸಮಸ್ಯೆಜಲೆ ಎದ್‌ರಿಸಿಯೊಂಟುಂಡು.

ಈ ಸಮಸ್ಯೆಜಲೆ ಜಂಡ್ ಬಗೆ ಆಕೊನುಗಾವುರು:

I) ನೈಸರ್ಗಿಕ ಸಮಸ್ಯೆಜ

II) ಸ್ವಯಂ ಆಕ್ಕೊಲ್ರೊ ಸಮಸ್ಯೆಜ

**I.** ನೈಸರ್ಗಿಕ ಸಮಸ್ಯೆಜ: ಆಲ್‌ಮಾರೆ ಜೀವನ ಈ ದುನಿಯಾವ್ರೆ ಒಟ್ಟಿಗೆ ಸೇರಿಟ್ಟುಂಡು. ಈ ದುನಿಯಾವುಲ್ ಅವ್ರುಗ್ ಬೇನ್ಮಾಯದೆಲ್ಲಾವುಂ ಕಿಟ್ಟ್. ಆಯೆಂಗಾ ಅದ್ ಕಿಟ್ಟೊನ್‌ಗಾಯಿಟ್ಟ್ ಅವುನು ಆಕ್‌ರೆ ಪ್ರಯತ್ನತ್ತ್‌ಗ್ ಹೊಂದಿಟ್ಟುಂಡು ಅದ್ ಕಿಟ್ಟ್‌ರೆ ಸಾಧ್ಯತೆ. ದುನಿಯಾವುಗು ಎದ್‌ರಾಯಿಟ್ಟ್ ದುನಿಯಾವ್ರೆ ಉಪಯೋಗ ಆಕಿಯೆಂಗ್ ಅದ್‌ರೆ ಮುಸೀಬತ್‌ಗ್ ನಜ ಬಲಿಯಾವೊನಾವ್ರು.

ಈ ನೈಸರ್ಗಿಕ ಸಮಸ್ಯೆಜಲೆಯುಂ ಸುಮಾರ್ ಬಗೆ ಆಕೊನುಗಾವುರು. ಆಯೆಂಗಾ, ಇದೆಲ್ಲ ತನ್ನಾಲೆ ಬಂಡೆ ಸಮಸ್ಯೆಜ. ಇದ್‌ರೆ ಪರಿಹಾರ ಆಕೊನೂಂಟ್ ಚೆಲ್ಲೊಗಾವುಲ್ಲೆ.

**II.** ಸ್ವಯಂಕೃತ ಸಮಸ್ಯೆಜ : ಮನುಷ್ಯಮ್ಮಾರೊ ಬೌದ್ಧಿಕ ಮಟ್ಟ ಯಾರ-ಕೊರಡಿ ಉಲ್ಲದ್‌ಗೊಂಡುತ್ತು ಇಜನ್ನೆ ಸಮಸ್ಯೆಜ ಉಂಡಾವ್ರು. ಬುದ್ಧಿ ಪಿನ್ನೆ ವಿವೇಚನೆ ಕೊರಡಿ ಉಲ್ಲೆ ಒರ್ತ ನಜಲೆ ಸಮುದಾಯತ್ತ್‌ಲ್ ಒರು ಬೇಂಡಾತೆ ಸೂರ ಆಕಿಯೆಂಗ್ ಇಡೀ ಸಮುದಾಯಮೇ ಆ ಹಲಾಕ್‌ಗ್ ಬಲಿಯಾವೊನಾವುರು. ಅದ್‌ಲಾಯಿಟ್ಟ್ ಇದ್ ನಜ ಬಲ್ಪಿಟ್ಟೊಲ್ಲೆ ಸಮಸ್ಯೆ ಅಂಟ್ ಚೊಲ್ಲ.

ಈ ಬಲ್ಪಿಟ್ಟೊಲ್ಲೆ ಸಮಸ್ಯೆಜಗ್ ಬ್ಯಾರಿ ಜನಾಂಗ ಬಲಿಯಾಯತ್ರ ಬೇರೆ ಜನಾಂಗ ಬಲಿಯಾಯಿಟ್ಟಿಲ್ಲೆ. ಬ್ಯಾರಿಜ ಎಂದಿಗ್ ಪಿನ್ನೆ ಎಜನೆ ಈ ಸಮಸ್ಯೆಜಲೆ ಬಲ್ಪೊಂಟ್ ಬನ್ಸ್‌ಟ್ಟ್ ಈ ಸಮುದಾಯತ್ತೆ ಪ್ರಗತಿಗ್ ತಡೆಯಾಯಿರಾರ್‌ಂಟ್ ಬುದ್ಧಾಟಿಟ್ಟ್ ಚೊಲ್ಲುಂಬೊ ಈ ಸ್ವಯಂಕೃತ ಸಮಸ್ಯೆಜಳೆ ಪಟ್ಟಿ ಕಿಟ್ಟ್‌ರ್.

1. ಶ್ರೇಣೀಕರಣ: ಬ್ಯಾರಿ ಸಮುದಾಯ ಬಲ್ಪಿಟ್ಟೆ ಸಮಸ್ಯೆಜಲ್ ಇದ್ ಒನ್ನಾಮತ್ತೆ ಸಮಸ್ಯೆ. ಇದ್ ಒರು ಕಲ್ಪನೇಂಟೆ ಬೀಯಾರಿಚೆಂಗುಂ, ಬ್ಯಾರಿಜಲೆ ಮನಸ್ಸ್‌ರೆ ಉಲ್ಲ ಇಜನ್ನೆ ಒರು ವರ್ಗೀಕರಣ ಉಂಡು; ಆ ಮನಸ್ಸ್‌ರೆ ಉಲ್ಲ ಉಲ್ಲದ್‌ರೆ ಪರ್ತ್‌ಗ್ ಎಡ್ತ್ತಲ್ಲಂಗ್ ಸಮಸ್ಯೆಜಲೆ ಮೂಲ ಕಂಡ್ ಪಿಡ್ಚೆಪೋಲೆ ಆವುಲ್ಲೆ.

ಈ ವರ್ಗೀಕರಣ ಪೋಲೆ ಬ್ಯಾರಿಜ:

a) ಪಾವತ್ತೆಜ, ಪಡಿಪಿಲ್ಲಾತಜ (ಪಡಿಪಿಲ್ಲಾತೆ ಪಾವತ್ತೆಜ)

b) ಪಾವತ್ತೆಜ, ಪಡಿಪ್ಪುಲ್ಲಜ (ಪಡಿಪ್ಪುಲ್ಲೆ ಪಾವತ್ತೆಜ)

c) ಪೈಸಕ್ಕಾರ್ ಪಡಿಪಿಲ್ಲಾತಜ (ಪಡಿಪಿಲ್ಲಾತೆ ಪೈಸಕ್ಕಾರ್)

d) ಪೈಸಕ್ಕಾರ್ ಪಡಿಪ್ಪುಲ್ಲಜ (ಪಡಿಪ್ಪುಲ್ಲೆ ಪೈಸಕ್ಕಾರ್)

e) ಮೊಯಿಲಾಕಮ್ಮಾರ್ (ಇಜ ಪಾವತ್ತೆಜ ಆವ್ಪೊಟ್ಟು, ಪೈಸಕ್ಕಾರ್ ಆವ್ಪೊಟ್ಟು, ದುನಿಯಾವ್ಪುರೆ ಇಲ್ಮ್ ಇಕ್ಕಟ್ಟ್ ಇಲ್ಲಾಂಟಿಕ್ಕಟ್ಟ್ ಸಮುದಾಯತ್ತೆ ಶ್ರೇಣೀಕರಣತ್ತೇ ಮೇಲ್ಪಡಿಲ್ ಇಜ ಇಕ್ಕ್ಯಾರ್)

ಬ್ಯಾರಿ ಸಮುದಾಯತ್ತ್ 'ಸಾಧಾರಣ ಮನಿಷ' ಆರ್‌ಂಟ್‌ಕೇಟೆಂಗ್ ಎಲ್ಲಾರುಂ ಕಾಟ್‌ರೆ ಈ ಶ್ರೇಣೀಕರಣತ್ತೆ ಕೀಲ್‌ರೆ ಪಡಿಲುಲ್ಲೆ 'ಪಾವತ್ತೆಜಲೆಯುಂ, ಪಡಿಪಿಲ್ಲಾತಜ'ಲೆಮ. ಎಲ್ಲಾರುಂ ಪೈಸೆಕಾಸ್‌ಲುಂ, ಪಡಿಪುಲುಂ ಉದ್ಧಾರ ಆಕೊನುಗು ಪರ್ತಾಯಿರೊಂ ಆವಂಡೆಮ. ಎಲ್ಲಾರುಂ ಬಲಿಕೊಡುಕುರೆ ಪೈಯುಂ ಅಪ್ಪೆ. ಆಯೆಂಗುಂ, ಅಪ್ಪೊಗೊರು ತಂಡದೇ ಆಯೆ ವ್ಯಕ್ತಿತ್ವ ಉಂಡು, ಒರು ಸ್ವೊರ ಉಂಡು, ಒರು ಜವಾಬ್ದಾರಿ ಉಂಡೊಂಟ್ ಒಪ್ಪಿಯೇಂಟ್ಯೆತೆಂಗ್ ಈ ಸಮುದಾಯತ್ತೆ ಕೆಟ್ಟ್‌ರೆದ್‌ಲ್ ಆವಂಡೆಯುಂ ಒರ್ ಪ್ರಾಲ್ ಎಡ್ತ್‌ಕಾಂಡ್.

2. ಶಿಕ್ಷಣತ್ತ ಸಮಸ್ಯೆ : ಇದೊರು ಯಾರ ಗೊಂದಲ ಆಕ್‌ರೆ ಸಮಸ್ಯೆ. ಎಂದಿಗ್ ಚೊನ್ನೆಂಗ್ :

a) ಶಿಕ್ಷಣಾಂಟ್ ಚೊನ್ನಂಗ್ ಎಂದ್ರೇಂಟ್ ಆರುಂ ಚೊಲ್ಲಾತೆದ್.

b) ಶಿಕ್ಷಣ ಎಂದಿಗ್? ಎಜನೆ? ಎತ್ರ ಆಂಟ್ ಆರ್‌ಗುಂ ಗೊಂತಾವಾತೆದ್

c) ತೆರಿಂಞಿಟ್ಟಾ, ತೆರಿಯಾಂಟಾ ಪಡಿಪ್ಪುರೆ ಲೌಕಿಕ ಶಿಕ್ಷಣ, ಧಾರ್ಮಿಕ ಶಿಕ್ಷಣಾಂಟ್ ಜಂಡ್ ಬಗೆಯಾಕಿಯೆದ್

d) ಪಡಿಕ್‌ರೆ ಪೈಸಾಕೊನುಗಾಯಿಟ್ಟ್‌ಂಟ್ ಉಲ್ಲೆ ಧೋರಣೆ.

ಮಿತ್ತ್‌ರೆ ಸಮಸ್ಯೆಜಲೆ ಚೊಲ್ಲುಂಬೊ ಮೇಲ್ಕಾಟಿಯ ಅಂಶತ್ತ್‌ಗ್ ಒತ್ತು ಕೊಡ್ತಿಟ್ಟ್ ವಿವರಿಕೊನಾವದು. ಬ್ಯಾರಿ ಸಮುದಾಯತ್ತ್‌ಗ್ ಮಾಹಿತಿಯುಂ, ಜಾಗೃತಿಯುಂ ಒಟ್ಟೊಟ್ಟುಗು ಕೊಡ್ಕೊನಾವುರು. ಎಲ್ಲಾರುಂ ಜಾಗೃತೆ ಚೊಲ್ಲುರಾರ್ ಆಯೆಂಗ್ ಮಾಹಿತಿ ಕೊಡುಕ್ಕುಲ್ಲೆ. ಇದ್‌ಕ್ಕೆ ಪುರಸತ್ತ್ ಇಲ್ಲಾತೆದ್ ಕಾರಣ ಆಯಿಟ್ಟಿಕ್ಕು. ಊಡೆ ಬ್ಯಾರಿ ಸಾಹಿತ್ಯ-ಸಾಂಸ್ಕೃತಿಕ ಕೇಂದ್ರತ್ತ್‌ಗ್ ಬೆಲಿಯ ಜವಾಬ್ದಾರಿ ಉಂಡು.

a) ಶಿಕ್ಷಣ ಚೊನ್ನೆಂಗ್ ಎಂದ್ರ?: ಶಿಕ್ಷಣ ಚೊನ್ನೆಂಗ್ ಮನುಷ್ಯರೆ ತಡಿ, ಬುದ್ಧಿ, ಚೇತನ (ರೂಹು), ಎಲ್ಲಾವ್ರುಂ ವಿಕಾಸ ಆವುಂಪೋಲೆ ಆಕ್‌ರೆ ಒರು ನಿರಂತರಮಾಯ ಪ್ರಕ್ರಿಯ ಆಯಿಟ್ಟಿಕ್ಕ್‌ರ್.

ಸಾಧಾರಣಾಯಿಟ್ಟ್ ಒರಾಲ್ ಚೆಯಿಕೊನಾಯಿಟ್ಟುಲ್ಲೆ ಸಾಮುದಾಯಿಕ ಜೀವನತ್ತ್‌ಲ್ ಕಂಡ್‌ಬಂಡೆ ಸಾರ್ವತ್ರಿಕ ತತ್ವತ್ತೆ ಶಿಕ್ಷಣ ಅವಲಂಬಿಸಿಟ್ಟಿಕ್ಕೊನು. ಚೊನ್ನೆಂಗ್, ದೀನಿಯಾಯ ಜೀವನತ್ತೆ ಒರು ನೋಟವುಂ, ದುನಿಯಾವುಡೆ ನೇರಾಯ ಜೀವನತ್ತೆ ಒರು ನೋಟವುಂ ಆದ್‌ಲ್‌ಬೇನು. ಬ್ಯಾರಿಜಲೆ ದೀನಿಯಾಯೇ ಜೀವನಾಂಟ್ ಚೊನ್ನೆಂಗ್ ಅದ್ ಇಸ್ಲಾಂ; ಬ್ಯಾರಿಜಲೆ ದುನಿಯವಿಯಾಯ ಜೀವನಾಂಟ್ ಚೊನ್ನೆಂಗ್ ಅದುಂ ಇಸ್ಲಾಂ. ಇಜನಿಕ್ಕುಂಬೊ ಬ್ಯಾರಿಜಲೆ ಪಡಿಪ್ಪುರೆ ಜಂಡ್ ನೋಟವುಂ 'ಇಸ್ಲಾಂ'ಟ್ ಚೊಲ್ಲುರೆ ಒರು ಬಿಂದುಲು ಸೇರ್‌ರ್. ಇದ್‌ರೆ ಅರ್ಥ ಸಾಮಾಜಿಕಮಾಯಿಟ್ಟ್ ಕೂಟತ್ತ್‌ಲ್ ಮಿಂಙ್ಞೊಗು ಅವಶ್ಯ ಉಲ್ಲದೆಲ್ಲಾ ಪಡಿಕ್ಕ; ಪಿನ್ನೆ ಅದ್ ಬ್ಯಾರಿ ಸಂಸ್ಕೃತಿರೆ ಪೂರ್ಣ ರೂಪ ಆಯ ಇಸ್ಲಾಮುಗ್ ವಿರುದ್ಧ ಆಯಿಟ್ಟಿಕ್ಕೊಗು ತೀರಾ.

ಈ ಜಂಡ್ ಮೂಲತತ್ವತ್ತೆ ಬುಡಾಂಟ್ ಒರು ವ್ಯಕ್ತಿತ್ವತ್ತೆ ರೂಪಿಸ್‌ರದೇ ನೇರಾಯ ಶಿಕ್ಷಣ. ಶಾಲೆ, ಮದ್ರಸ ಇದ್‌ರೆ ಒರು ಚಂದತ್ತೆ ರೂಪ ಮಾತ್ರ. ಶಿಕ್ಷಣ ಚೆಲ್ರೊ ಪ್ರಕ್ರಿಯ ಜೀವನ ಇಡೀ ನಡನ್ನೋಂಟಿಕ್ಕ್.

b) ಶಿಕ್ಷಣ ಎಂದಿಗ್? ಎಜನೆ? ಎತ್ರ?

ಶಿಕ್ಷಣತ್ತೆ ಸುರೂತೆ ಶಾಲೆ ಒರು ಕುಟುಂಬ. ಬ್ಯಾರಿಜಲೆ ವೈಯಕ್ತಿಕ ಜೀವನತ್ತ್‌ಲ್ ಕುಟುಂಬ ಜೀವನತ್ತ್‌ಗ್ ಬೆಲಿಯ ಪ್ರಾಮುಖ್ಯತೆ ಉಂಡು. ಸಾಮಾಜಿಕ ವ್ಯವಸ್ಥೆಗ್ ಕುಟುಂಬಮೇ ಒರು ಪಂಚಾಂಗ. ಬೇರೆ ಸಮುದಾಯತ್ತೆ ಕಾಂಟ ಬ್ಯಾರಿ ಸಮುದಾಯತ್ತ್‌ಲ್ ಕುಟುಂಬತ್ತ್‌ಗ್ ಯಾರ ಪ್ರಾಮುಖ್ಯತ ಉಂಡು. ನಜಲೆ ಸಮುದಾಯವುಂ ಕುಟುಂಬ ವ್ಯವಸ್ಥೆರೊ ಮಿಡ್‌ಕ್‌ಲೇ

ಅನುಸರಿಸಿಯೋಂಟುಂಡು. ಚೊನ್ನೆಂಗ್, ಒರು ಕುಟುಂಬತ್ತೆ ಬಲ್ರೊಗ್ ಬೇನ್ಡಾಯತ್ರಮೇ ಪಡಿಚ್ಚೆಂಗ್ ಮ್ಮೆಯಾವುಂಟು ಚೊಲ್ರೆ ಅಭಿಪ್ರಾಯ ನಜಲೆ ನಡುಲುಂಡು.

ಇಂಡತ್ತೆ ವೈಜ್ಞಾನಿಕ ಕಾಲತ್ತ್‌ಲ್ ಪಡಿಪುರೆ ಗೆಲ್ಲ್ ಪೊಟ್ಟಿಯೋಂಟುಂಡು. ಮಿನಿಟ್ ಮಿನಿಟುಗುಂ ಈ ದುನಿಯಾವು ಬದಲಾಯೋಂಟುಂಡು. ದುನಿಯಾವುಲಿಡೀ ನೊರಂಙಿಟ್ಟುಲ್ಲೆ ಶಿಕ್ಷಣತ್ತೆ ಒರು ಸೀಮಿತ ಶಿಕ್ಷಣ ಕ್ರಮ ಪಡಿಬಾಟೆ ತರೂಂಟು ಚೊಲ್ಲೊಗಾವುಲ್ಲೆ. ಅದ್‌ಲಾಯಿಟ್ಟ್ ಶಿಕ್ಷಣ ಎಂದಿಗ್? ಎಂಙನೆ? ಎತ್ರಂಟ್ ಚೊಲ್ಲುರೆ ಕಲ್ಪನೆ ಪ್ರತಿಯೊರು ಬ್ಯಾರಿರೆ ಮನಸ್ಸ್‌ಲ್ ಇಕ್ಕೊನು.

ಶಿಕ್ಷಣತ್ತ್‌ಗ್ ಮಿತಿ ಇಲ್ಲೆ. ಒರ್ತ ತಂಡೆ ಜೀವಮಾನ ಇಡೀ ಪಡಿಕ್ರೆದ್ ತೆಲ್ಲೆಟೆಕ್ಕು. ಆಯೆಂಗಾ ಅವುನುಗದ್ ಮ್ಮೆಯಾವ್ರು. ಆ ಮ್ಮೆಯಾವುರೆತ್ರರಿಗುಂ ಪಡಿಚಿಲ್ಲೆಂಗ್, ಅವ್ರು ಈ ಸಮುದಾಯತ್ತ್‌ಗ್ ಒರು ಸಮಸ್ಯೆ ಆಯಿಟ್ಟ್ ತೀರ್ರ.

**(c) ಧಾರ್ಮಿಕ ಶಿಕ್ಷಣ ಪಿನ್ನೆ ಲೌಕಿಕ ಶಿಕ್ಷಣಾಂಟ್ ಚೊಲ್ರೆ ವಿಂಗಡನೆ ಸಮಮಾ? :**

ಪಳ್ಳಿ ದರ್ಸ್‌ಲ್ ಪಡಿಪ್ಪಾಟ್‌ರದ್ ಧಾರ್ಮಿಕ ಶಿಕ್ಷಣ; ಶಾಲೆ ಕಾಲೇಜ್‌ಲ್ ಪಡಿಪ್ಪಾಟ್‌ರೆದ್ ಲೌಕಿಕ ಶಿಕ್ಷಣ ಚೆಲ್ರೊ ಒರು ಕಲ್ಪನೆ ನಂಕೆಲ್ಲಾ ಪರಪ್ಪುಲೇ ಬನ್ನ್‌ಟ್ಟುಲ್ಲದ್. ಈ ವಿಂಗಡನೆ ಅತ್ರೆ ಸಮ ಅಲ್ಲ. ಎಂದಿಗ್ ಚೊನ್ನೆಂಗ್, ಧಾರ್ಮಿಕ ಕ್ಷೇತ್ರತ್‌ಲುಲ್ಲೆ ದರ್ಸ್, ಅರೇಬಿಕ್ ಕಾಲೇಜ್‌ಲ್ ಪಡಿಪ್ಪಾಟ್‌ರೆ ಪಾಠ ಬೂಕ್‌ಜಲೆ ನೋಕುಂಬೊ ಆದ್‌ಲ್ ಬಂಡೆ ಅಧ್ಯಯನ ವಿಷಯಜ ಪಿನ್ನೆ ಶಾಲೆ, ಕಾಲೇಜ್‌ಲ್ ಪಡಿಪಾಟ್‌ರೆ ಅಧ್ಯಯನ ವಿಷಯಜವುಂ ಒರೇ ಪೋಲೆ ಇಕ್ರೆದ್ ಕಾಂಡ್. ಉದಾಹರಣೆಗ್: ದರ್ಸ್‌ಲ್ ಪಡಿಪಾಟ್‌ರೆ ಖುಲಾಸತುಲ್ ಹಿಸಾಬ್, ಉಕ್‌ಲದೀಸ್, ಶರ್ಹ್ ತಹದೀಬ್ ಪೋಲೋತೆ ಕಿತಾಬಿಜ- ಅಂಕಗಣಿತ, ರೇಖಾಗಣಿತ, ವ್ಯೋಮಶಾಸ್ತ್ರ, ತರ್ಕಶಾಸ್ತ್ರ ಪೋಲೋತೆ ಬಿಸಯಂಜಳೆ ಉಲ್ಲೊಂಡ್ರು. ಫಿಕ್ಹ್ ಗ್ರಂಥತ್ತ್‌ಲ್ ಬಂಡೆ ಪೋಲ್ತೆ ಝಕಾತ್, ಫರಾಯಿಳ್‌ರೆ ಇಲ್ಮ್‌ರೆ ಗಣಿತ ಶಾಸ್ತ್ರ ಇಲ್ಲಾಂಟೆ ಪಡಿಕೊನುಗು ಸಾಧ್ಯಮೇ ಇಲ್ಲೆ. ಅದೇ ಪೋಲೆ ಕಚ್ಚೋಡ, ವಹಿವಾಟ್ ಲಾಭ ನಷ್ಟ ಇಜಂತೆ ಬಿಷಯಜ ಫಿಕ್ಹ್ ಗ್ರಂಥತ್ತೆ ಮುಖ್ಯ ಭಾಗಜ. ಇದ್ ಕಾಲೇಜ್‌ಲ್ ಪಡಿಪ್ಪಾಟ್‌ರೆ ಕಾಮರ್ಸ್, ಇಕಾನಾಮಿಕ್ಸ್‌ಲ್ ಉಲ್ಲದೆ.

ಪಡಿಪುರೆ ಧಾರ್ಮಿಕ ಪಿನ್ನೆ ಲೌಕಿಕಾಂಟ್ ಚೊಲ್ಲುರೆ ವಿಂಗಡನೆ ಆಕಾಂಟ್ ಇದ್ ಜಂಡುಂ ಬ್ಯಾರಿಜಲೆ ದೀನುಂ, ದುನಿಯಾವುರೆ ಜಿವನತ್ತ್‌ಗ್ ಪರಸ್ಪರ ಪೂರಕಾಂಟ್ ತೆರಿಂಙೋಲೊನು. ಬ್ಯಾರಿಜಲೆ ಜೀವನತ್ತ್‌ಲ್ ಇಸ್ಲಾಂ ಒರು ಅಧ್ಯಯನ ಬಿಷಯ ಆವ್ರೊನು. ಅದ್‌ಕ್ಕ್ ಪೂರಕ ಆವುರೆ ಏದ್ ಶಿಕ್ಷಣ ಕಿಟ್ಟ್‌ರಾ ಆದ್ರ ಎಲ್ಲಾ ಪಡಿಕೊನುಗು ಬ್ಯಾರಿಜ ತಯಾರ್‌ವೊನು.

**d) ಪಡಿಪು ಪಿನ್ನೆ ಸಂಪಾದನೆ-ಇದ್ ಜಂಡ್‌ರೆ ಸಂಬಂಧ:**

ಊಡೆಯುಂ ಬ್ಯಾರಿಜ ಅಜಲೆ ಧೋರಣೆಲ್ ಎಡಂಕಿರಾರ್‌ಂಟ್ ಬಿಯಾರಿಕ. ಎಂದಿಗ್‌ಂಟ್ ಚೊನ್ನೆಂಗ್ ಬ್ಯಾರಿಜಲ್ಲ್ ಸಾಧಾರಣ ಆಯಿಟ್ಟ್ ಒರು ಪ್ರಶ್ನೆ ಉಂಡು. ಪಡ್ಚಿಟ್ಟ್ ಎಂದ್‌ರೆ ಆಕ್‌ರೆ? ಚೊನ್ನೆಂಗ್ ಪಡಿಚ್ಚಜ ಯಾರಾಯ ಪೋಲೆಮೇ ಊಡೆ ನಿರುದ್ಯೋಗ ಸಮಸ್ಯೆ ಯಾರಾವುರುಂಟು ಒರು ನಂಬಿಕೆ. ಇದ್ ಸಮ ಅಲ್ಲ. ಪಡಿಚ್ಚಲ್ಲೆಂಗುಂ ಊಡೆ ನಿರುದ್ಯೋಗ ಉಂಡು. ಆಯಗೊಂಡು ಪಡಿಪುಲಾಯಿಟ್ಟ್ ನಿರುದ್ಯೋಗ ಸಮಸ್ಯೆ ಉಂಡಾವ್ರು ಚೆಲ್ರೊ ವಾದ ಸಮ ಅಲ್ಲ. ಉದ್ಯೋಗಂಟ್ ಚೊಲ್ಪ್ರದ್ ಪಡಿಪುರೆ ಒರು ಸಾಧ್ಯತೆ ಮಾತ್ರ. ಒರ್ತ ಯಾರ ಪಡಿಚತ್ತರೆ ತಂಡೆ ಕ್ಷೇತ್ರತ್ತ್‌ಲ್ ಕಾರ್ಯಕ್ಷಮತೆ, ಪ್ರಾಮಾಣಿಕತೆ, ಸಹನೆ ಎಲ್ಲಾ ಕಾಟ್‌ರ ಪಿನ್ನೆ ಪೈಪೋಟಿರೆಯುಂ ಎದ್‌ರಿಸ್‌ರ.

ಒಟ್ರಾಸಿ ಶಿಕ್ಷಣ ಒರು ಸುಸಂಸ್ಕೃತ ಸಮುದಾಯತ್ತೆ ತಯಾರಾಕ್‌ರ್.

**3) ಸಾಮಾಜಿಕ ಸಮಸ್ಯೆಜ:** ಬ್ಯಾರಿ ಸಮುದಾಯತ್ತೆ ಸ್ವಯಂಕೃತ ಸಮಸ್ಯೆಲ್ ಸಾಮಾಜಿಕ ಸಮಸ್ಯೆ ಚೊಮ್ಮೆ ಉಂಡು. ಇಂಡತ್ತೆ ಸ್ಥಿತಿಗತಿರೆ ಎಡ್ತ್‌ಟ್ಟ್ ಮಾತ್ರ ಪಡಿಕ್ಕುಂಬೊ ಕೀಲ್ ಕಾಟಿಯ ಸಮಸ್ಯೆಜಲೆ ಕೂಡ್ಲೆ ಗುರುತಿಸೊನುಗಾವುರು.

**a) ಕಾಸಿ (ವರದಕ್ಷಿಣೆ) :** ಬ್ಯಾರಿ ಸಮುದಾಯತ್ತೆ ಎಲ್ಲಾ ಸಾಮಾಜಿಕ ಸಮಸ್ಯೆಜವುಂ ಇದ್ರೆ ಚುತ್ತ್‌ಲ್ ಚುತ್ತಿಯೋಂಟುಂಡು. ಚೊಮ್ಮೆ ವರ್ಷತ್ತ್‌ಲ್‌ಂಟ್ ಕಾಸಿಗ್ ಎದ್‌ರಾಯಿಟ್ಟ್ ಸಾಹಿತ್ಯ, ಭಾಷಣ, ಸೆಮಿನಾರ್, ಪ್ರತಿಜ್ಞೆ ನಡನ್ನೊಂಟುಂಡು; ಆಯೆಂಗುಂ ಈ ಅನಿಷ್ಟ ನಜಲೆ ಸಮುದಾಯತ್ತೆ ಬುಟ್ಟುಟ್ಟು ಪೊಯಿಟ್ಟೆಲ್ಲೆ. ಪೈಸತ್ತೆರೂಪತ್ತ್‌ಲ್ ಇನ್ನದ್ ಬಂಗಾರ್‌ರೆ ರೂಪತ್ತ್‌ಗ್; ಬಂಗಾರೆ ರೂಪತ್ತೆದ್ ವಾಹನತ್ತೆ ರೂಪತ್ತ್‌ಗ್; ವಾಹನತ್ತೆ ರೂಪತ್ತೆದ್ ವೀಸತ್ತೆ ರೂಪತ್ತ್‌ಗ್; ವೀಸತ್ತೆ ರೂಪತ್ತೆದ್ ರಿಯಲ್ ಎಸ್ಟೇಟ್ ರೂಪತ್ತ್‌ಗ್ ಇಜನೆ ರೂಪಾಂತರ ಆಯೋಂಟ್ ಬಂತ್ ಕಾಸಿ ನಜಲೆ ಸಮುದಾಯತ್ತೆ ಕಲ್ತ್‌ಇಕ್ಕಿಯೋಂಟೆ ಉಂಡು. ಕೊರಿಯ ನಾಲ್ ಕಲ್ಲೆಂಗ್ ಕೊಳ್ಳೆ, ದರೋಡೆ, ಆಕ್ರಮಣ ಎಲ್ಲವುಂ ಕಾಸಿಗ್ ಬೇನಾಯಿಟ್ಟ್ ನಡಕ್‌ರೊ ಸಾಧ್ಯತೆ ಉಂಡು.

ಜಾಸಿ ಒರು ಸಾಮಾಜಿಕ ಅನಿಷ್ಟ ಇದ್ ಸಮುದಾಯತ್ತ ಅಸ್ತಿತ್ವತ್ತಮೇ ಪ್ರಶ್ನೆ ಆಕ್‌ರ್. ಇದ್‌ರೊ ನಿರ್ಮೂಲನ ಆಕ್ರೆ ಕಾಲತ್ತೆ ಆವಶ್ಯಕತೆ ಆಯಿಟ್ಟುಂಡು.

b) ವಿದ್ಯಾಭ್ಯಾಸ: ಶಿಕ್ಷಣತ್ತ್‌ಗ್ ಸಂಬಂಧಪಟ್ಟ್‌ತ್ತ್ ಬ್ಯಾರಿ ಸಮುದಾಯತ್ತ್‌ಲುಳ್ಳೆ ಒರು ನಿರ್ದಿಷ್ಟ ಬಯಸ್‌ರೆ ಬ್ಯಾರಿಜಲೆ ಈ ರೀತಿಲ್ ವರ್ಗೀಕರಣ ಆಕ :

ಶಾಲೆಗ್ ಸಂಬಂಧ ಪಟ್ಟೆಪೊಲೆ:

1) ಶಾಲೆಗ್ ಪೋವಾತೆ 6-14 ಬಯಸ್ ತೋಲ್ತ್ತೆ ಮಕ್ಕ
2) ಶಾಲೆ ಪಾದಿಲ್ ಬುಟ್ಟೆ 6-14 ಬಯಸ್‌ರೆ ಮಕ್ಕ
3) 15-25 ಬಯಸ್‌ರೆ ಅರೆ ಎಲ್ತ್‌ರೆಜ ಪಿನ್ನೆ ಎಲ್ತ್ ಇಲ್ಲಾತಜ
4) ಶಾಲೆ ಬುಟ್ಟೆ 15-25 ಬಯಸ್‌ರೆ ಎಲ್ತ್‌ರೆಜ.

ಮದ್ರಸ ಪಿನ್ನೆ ದರ್ಸ್‌ಗ್ ಸಂಬಂಧ ಪಟ್ಟೆಪೋಲೆ: (ಬಯಸ್ ಪರಿಗಣನೆಗ್ ಇಲ್ಲೆ)

1) ಒನ್ನ್‌ರೆ ಅಂಜಾಂಕ್ಲಾಸ್‌ತ್ತೋಲ ಪಡಿಚ್ಚಜ
2) ಒನ್ನ್‌ರೆ ಏಳ್‌ತೋಲ ಪಡಿಚ್ಚಜ
3) ಮದ್ರಸತ್ತೆ ದರ್ಸ್ ಅಲ್ಲೆಂಗ್ ಅರಬಿಕ್ ಕಾಲೇಜ್‌ಗ್ ಸೇರ್ಪಡೆ ಆಯೆಂಜ (ಇಜ ಸಾಧಾರಣ ಆಯಿಟ್ಟ್ ಶಾಲೆ ಬುಟ್ಟ್‌ತ್ತಿಕ್ಕ್‌ರಾರ್)
4) ಅರಬಿಕ್ ಕಾಲೇಜ್‌ರೆ ಡಿಗ್ರಿ ಎಡ್ತ್ತಜ ಪಿನ್ನೆ ಎಡ್ಕಾತಜ

ಇಜನೆ ಪ್ರತಿ ಒನ್ನ್‌ರೆ ವರ್ಗೀಕರಣ ಆಕಿಯೋಂಟ್ ಪೋಯೆಂಗ್ ಸಮುದಾಯತ್ತೆ ಒರು ಚಿತ್ರಣ ನಂಕ್ ಕಿಟ್ಟ್‌ರ್. ಒರು ಸಮೀಕ್ಷೆ ಪ್ರಕಾರ 6-10 ವರ್ಷತ್ತೆ ಮಕ್ಕ 36%, ಪಿನ್ನೆ 11-13 ವರ್ಷತ್ತೆ ಮಕ್ಕ 38% ಮಾತ್ರ ಶಾಲೆ ಪಡಿಕ್ಕ್‌ರಾರ್. ಚೊನ್ನೆಂಗ್, ಪ್ರಾಥಮಿಕ ಶಿಕ್ಷಣತ್ತಮೇ ವಂಚಿತ ಆಯ ಮಕ್ಕಮೇ 62% ಉಳ್ಳಾರ್. ಇಜನಿಕ್ಕುಂಬೊ ನಜಲೊ ಸಮುದಾಯ ಶೇಕಡಾ ನೂರ್‌ರತ್ರೆ ಸಾಕ್ಷರತೆ ಸಾದಿಸೊಗು ಇನ್ನತ್ರ ಕಾಲ ಬೇನಾವು?

3) ನಿರುದ್ಯೋಗ: ಇದೊರು ಸಾಮಾಜಿಕ ಸಮಸ್ಯೆ ಆಯೆಂಗುಂ ಇದ್‌ರೆ ಮನೋವೈಜ್ಞಾನಿಕ ಆಯಿಟ್ಟೇ ಪಡಿಕ್ಕೊನಾವ್ವುರು. ಎಂದೇಂಟ್ ಚೊನ್ನೆಂಗ್ ಸೂರಂಟ್ ಚೊಲ್ಲುಂಬೊಮೇ ಇನ್ನೊರು ಸಮಸ್ಯೆ ಎದ್‌ರ್‌ಗ್ ಬಂಡ್ ಸಂಬಳತ್ತೆದ್. ಕೊರೊಡಿ ಸಂಬಳ್ತ್‌ಗ್ ಸೂರ ಆಕ್‌ರೆಂಗ್ ಎತ್ರ ಬೇನೆಂಗ್ ಸೂರ ಇಕ್ಕ್‌ರ್. ಆಯೆಂಗ್ ಅದ್‌ಕ್ಕ್ ಆರುಂ ತಯಾರಿಕ್ಕಿಲ್ಲೆ. ಅವ್ವು ಸೋಮಾರಿಯಾಯಿಟ್ಟ್ ದೆಚ್ಚೆಂಗುಂ ಅವ್ವು ಕೊರೊಡಿ ಸಂಬಳ್ತ್‌ಗ್ ನೈಕ್‌ಲ್ಲಾಂಟ್ ನಜಲೆ ಸಮುದಾಯತ್ತೆ ಚೊಮ್ಮ ಆಲ್ ಪ್ರತಿಜ್ಞೆ ಆಕಿಯೋ ಪೋಲೆ ಉಂಡು. ಇನ್ನೊನ್ನು ಪಡಿಪ್ಪುಗ್ ತಕ್ಕ ಸೂರ ಇಲ್ಲಾಂಟುಲ್ಲೆದ್. ಈ ನಿಪ್ಪು ಬದಲಾವ್ವೊನು. ಉಳ್ಳೆ ಸೂರತ್ತೆ ಕಿಟ್ಟೆಯ ಸಂಬಳ್ತ್‌ಗ್ ಆಕಿಟ್ಟ್ ನಜಲೆ ಅನುಭವತ್ತೆ ಯಾರ ಆಕಿಟ್ಟ್ ಮೇಲ್ ಮೇಲ್ ಪೋನು. ಬ್ಯಾರಿಜಲೆ ಪಲೇ ಕಾಲತ್ತೆ ಚರಿತ್ರೆ ನೋಕಿಯೆಂಗ್ ಬ್ಯಾರಿಜ ಎಲ್ಲಾ ಸೂರವುಂ ಆಕೊನುಗು ತಯಾರಿನ್ನಾರ್. ಸಾಹಸಿಜ, ಧೈರ್ಯಶಾಲಿಜ, ನೇರಸ್ಥಮಾರ್ ಆಯಿಟನ್ನಾರ್. ಇಂಡತ್ತೆ ಬ್ಯಾರಿಜಲ್ಲ್ ಆ ಮನಸ್ಸ್ ಬೆಳೆಯೋನು.

4) ಆರ್ಥಿಕ ಸಮಸ್ಯೆಜ : ಬ್ಯಾರಿಜ ಅಲ್ಲೆಂಗ್ ವ್ಯಾಪಾರಿಜ ಅಂಟ್ ಎಲ್ಲಾ ಮೋತು ಗುರುತಿಸಿಯೋ ನಜಲೆ ಸಮುದಾಯತ್ತೆ ಆರ್ಥಿಕ ಪರಿಸ್ಥಿತಿ ಇಂಡ್ ಶೋಚನೀಯ ಆಯಿಟಿಕ್ರ್. ಬ್ಯಾರಿ ಸಮುದಾಯ ಪಡಿಚ್ಚೋಂಟ್ ಬನ್ನೆ ಸೂರ ಎಂದ್ರಂಟ್ ಚೊನ್ನೆಂಗ್ ಬೀಡಿ ಕಟ್ಟ್‌ರೆದ್, ಅದ್‌ರೆ ಕಂಟ್ರಾಕ್ಟ್, ದಿನಸ್ ಅಂಜಾಡಿ, ಮೀನ್ ಬಿಕ್ಕ್‌ರೆ, ಕೃಷಿ, ಮರತ್ತೆ ಬಾನಿಯ, ಫಲಬಸ್ತ್ ಬಾನಿಯ, ಗುಜರಿ ಬಾನಿಯ, ಜವುಳಿ ಬಾನಿಯ. ಬೆಲಿಯೊ ಬಾನಿಯಂಟ್ ಚೊನ್ನೆಂಗ್ ಮರತ್ತೆ ಮಿಲ್ಲ್. ಇತ್ರಮೇ ನಜಲೆ ಬಾನಿಯತ್ತೆ ಸಕಲ್. ಇಂಡತ್ತೆ ವೈಜ್ಞಾನಿಕ ಕಂಡ್ ಪಿಡಿತತ್ತ್‌ಲ್ ಬ್ಯಾರಿ ಸಮುದಾಯ ತಲೆ ಇಟ್ಟ್‌ಟ್ಟೇ ಇಲ್ಲೆ, ಇನ್ನೆಂಗುಂ ಬೆರಳೆಣಿಕೆಗ್ ಮಾತ್ರ.

5) ಸಾಂಸ್ಕೃತಿಕ ಸಮಸ್ಯೆಜ : ಬ್ಯಾರಿ ಸಮುದಾಯತ್ತ್‌ಲ್ ಸಂಸ್ಕೃತಿ ಚೊನ್ನೆಂಗ್ ಸಂತಾನತ್ತ್‌ಲೇ ಬನ್ನೆ ಪೋಲ್ತ್ತೆ ಆದತ್, ಆಚಾರ-ವಿಚಾರ, ನಡತವಾಸಿ, ಕಲೆ, ಇಬಾದತ್-ವಿಶ್ವಾಸತ್ತೆ ಕೂಟ. ಊಡೆ ವಿಶ್ವಾಸತ್ತ್‌ಲುಂ ಇಬಾದತ್ತ್‌ಲುಂ ಏಕರೂಪತೆ ಉಂಡು. ಬಾಕಿ ಉಳ್ಳೆದ್‌ಲ್ ವೈವಿಧ್ಯತೆ ಉಂಡು. ಬಾಕಿ ನಡವಡಿಲ್ ಸುಸಂಸ್ಕೃತಿ ಪಿನ್ನೆ ವಿಕೃತಿ ಜಂಡುಂ ಸ್ಪಷ್ಟ ಆಯಿಟ್ಟ್ ಕಾನೊಗು ಸಾಧ್ಯ

ಉಂಡು. ಬ್ಯಾರಿ ಸಮುದಾಯತ್ತ್‌ಲ್ ಪೆಣ್ಣ್‌ಙಗ್ ಸಮಾನತೆರೆ ಕಾಂಟ ಮರ್ಯಾದೆ ಯಾರ. ಇದ್‌ಲಾಯಿಟ್ಟ್ ಕುಟುಂಬತ್ತ್‌ಲ್ ಪೆಣ್ಣ್‌ಙಗ್ ಒರು ಬೆಲಿಯ ಸ್ಥಾನ ಉಂಡು. ಕುಟುಂಬತ್ತೆ ಯಜಮಾನ ತಂಡೆ ಸರ್ವಸ್ವತ್ತೆಯುಂ ಕುಟುಂಬತ್ತೆ ನಲ್ಲೆದ್‌ಗಾಯಿಟ್ಟ್ ಬೈಕ್‌ರ. ಆಯೆಂಗುಂ, ಬ್ಯಾರಿ ಸಮುದಾಯ ನೈತಿಕವುಂ, ಸಾಂಸ್ಕೃತಿಕವುಂಮಾಯಿಟ್ಟ್ ಕೊರಿಯ ಸಮಸ್ಯೆಙಲೆ ಎದ್‌ರಿಸಿಯೋಂಟುಂಡು.

ಮುಖ್ಯಮಾಯಿಟ್ಟ್ ನಙಲೆ ಸಮುದಾಯತ್ತ್‌ಲ್ ನಡಕ್ಕ್‌ರೆ ಪೊಲ್ತೆ ಸಾಂಸ್ಕೃತಿಕ ಅದಃಪತನತ್ತೆ ಜಂಡ್ ಉದಾಹರಣೆಙ

1) ತಲಾಖ್‌ರೆ ಅನುಮತಿರೆ ದುರುಪಯೋಗ ಆಕ್‌ರೆ

2) ಬಹುಪತ್ನಿತ್ವತ್ತೆ ಸಾಧ್ಯತೆರೆ ದುರ್ಬಳಕೆ ಆಕ್‌ರೆ.

ಬೆರುಂ ಕಾಸಿಗಾಯಿಟ್ಟ್ ತಲಾಖ್ ಕೊಡ್ತ್ಟ್ಟು ಬದಲಿ ಮಂಙಲ ಆಯೆದ್, ಪಿನ್ನೆ ಬೆರುಂ ಕಾಸ್‌ಗಾಯಿಟ್ಟ್ ಜಂಡ್ ಮೂನ್ ಮಂಙಲ ಆಯೆ ಉದಾಹರಣೆ ನಙಗ್ ಕಿಟ್ಟಿರ್.

**ಚರ್ಚೆಗಾವುಂಪೋಲ್ತೆ ಇತರ ಕೊರಿಯ ಸಲಹೆಙ:** ಬ್ಯಾರಿಙಲೆ ಉಗಮ ಎವುಡೆಮಾ ಆಯಿಟ್ಟ್‌ಕ್ಕಟ್ಟ್, ಇಪ್ಪ ನಙ ಬ್ಯಾರಿ ಚೆಲ್ರೆ ಅನನ್ಯತ್ತ್‌ಲ್ ಗುರುತಿಸಿಟ್ಟ್‌ಯಿರ್. ಇನ್ನ್ ನಙಲೆ ಪ್ರತಿಯೊರು ಚಟುವಟಿಕೆಯುಂ ಜೋರಾಯಿಟ್ಟ್ ನಡಕ್ಕೊನು. ನಙ ಸಮುದಾಯತ್ತ್‌ಗ್ ಬೆಲ್ಕ್‌ರಾವೊನು. ಇದ್‌ಕಾಯಿಟ್ಟ್ ಚರ್ಚೆಗ್ ಅವಕಾಶವುಳ್ಳೆ ಕೊರ್ಯ ಸಲಹೆಙ:

ಶಿಕ್ಷಣ :

1) ಪ್ರತಿಯೊರು ಜಮಾಅತ್‌ಲುಂ ಬ್ಯಾರಿಮಾರ್‌ಗ್ ಆಧುನಿಕ ಶಿಕ್ಷಣ ಕಿಟ್ಟುಂಪೋಲೆ ಪ್ರಾಥಮಿಕ/ಪ್ರೌಢಶಾಲೆರೆ ತೊರಕ್ಕ್‌ರೆ.

2) ಮದ್ರಸ ಪಡಿಪ್ಪಾಟಿಯೆಲ್ ಪಿನ್ನೆ ಬಾಯಿಲಿಟ್ಟ್‌ಟ್ಟ್ ಬಂದಾಕ್‌ರೆ ಮದ್ರಸತ್ತೆ ತೊರನ್ನಿಟ್ಟ್ ಇಪ್ಪ ಉಳ್ಳೆ ಅಂಜಾಂಕ್ಲಾಸ್‌ರೆ ಪತ್ತಾಂಕ್ಲಾಸ್ ತೋಲೊಂ ಆಕಿಟ್ಟ್ ಪಡಿಪ್ಪಾಟ್‌ರೆ ವ್ಯವಸ್ಥೆ ಆಕೊನು. ಅದ್‌ರೊಟ್ಟಿಗೆ ಪಾಠ ಬೂಕುಙ ಬ್ಯಾರಿ ಭಾಷೆಗ್ ತರ್ಜುಮೆ ಆವೊನು.

3) ಪಳ್ಳಿಡೆ ದರ್ಸ್‌ಲ್ ಪಡಿಕ್‌ರೆ ಮುತಅಲ್ಲಿಮೀಂಙಗ್ ಗಣಿತ, ಸಮಾಜಶಾಸ್ತ್ರ, ವಿಜ್ಞಾನ, ಭಾಷೆ ಇತ್ಯಾದಿ ವಿಷಯತ್ತೆ ಪಡಿಪ್ಪಾಟೊನುಗು ನಿರುದ್ಯೋಗಿ ಪದವೀಧರರೆ ನೇಮಕ ಆಕಿಟ್ಟ್ ಅಙಲೆ SSLC ಪರೀಕ್ಷೆಗ್ ಕೆಟ್ಟುನುಗು ತಯಾರಾಕೊನು. ಇಪ್ಪ ಸರಕಾರತ್ತ್‌ಲ್ ಕಿಟ್ರೆ "ನಿರಂತರ ಶಿಕ್ಷಣ ಯೋಜನೆ"ರೆ ಮೂಲಕ ಇದ್ ಸಾಧ್ಯ.

4) ವಯಸ್ಕರ ಶಿಕ್ಷಣ ಕೇಂದ್ರ ಬ್ಯಾರಿಙ ಬ್ಯಾರಿಙಗಾಯಿಟ್ಟ್ ತೊರಕ್ಕೊನು.

ಉದ್ಯೋಗ :

1) ನಿರುದ್ಯೋಗಿ ಬ್ಯಾರಿಙ ಕಿಟ್ಟಿಯ ಸಾಧಾರಣ ಸೊರೆಂಗುಂ ಆಕೊನುಗು ತಯಾರಾವೊನು. ವಿದೇಶತ್ತ್‌ಲುಳ್ಳೆ ಛಾಲಕತ್ತೆ ಬ್ಯಾರಿಙಲ್ಲುಂ ನಿರುದ್ಯೋಗಿಙ ಉಳ್ಳಾರ್. ಅಙಲೆ ಸ್ಥಿತಿಯುಂ ಊಡ್ತ ನಿರುದ್ಯೋಗಿಙಲೆ ಪೋಲೆಮೇ ಉಂಡು. ಅಙವುಂ ಕಿಟ್ಟಿಯ ಸಾಧಾರಣ ಸೊರೆಂಗುಂ ಆಕೊನುಗು ತಯಾರಾವೊನು.

2) ಸರ್ಕಾರಿ, ಅರೆಸರ್ಕಾರಿ, ಪ್ರೈವೇಟ್ ಕ್ಷೇತ್ರತ್ತ್‌ಲ್ ಸೊರತ್ತ್‌ಗ್ ಸೇರೊನುಗ್ ಅರ್ಹತೆ ಉಳ್ಳಙಲೆ ಅದ್‌ಕ್ಕಾಯಿಟ್ಟ್ ತಯಾರಾಕ್‌ರೊ ವ್ಯವಸ್ಥೆ ಉಂಡಾಕೊನು. ಮೀಸಲಾತಿರೆ ಬಗ್ಗೆ ಅರಿವುಂಡಾವೊನು.

3) ಬೀಡಿ ಉದ್ಯಮತ್ತ್‌ಗ್ ಪರ್ಯಾಯ ಆಯಿಟ್ಟ್, ಬಳ್ಳಿ ತಯಾರಾಕ್‌ರೆ, ಕೋಳಿ ಬಲ್ತ್‌ರೆ, ಕೋಳಿ ಮುಟ್ಟೆ ಉತ್ಪಾದನೆ ಆಕ್‌ರೆ ಘಟಕ, ತುನ್ನ್‌ರೆ ಕೇಂದ್ರ ಇದ್‌ಲೇದಂಗ್ ಒನ್ನ್‌ರೆ ಆಯ್ಯಾಕ್‌ರೆ.

4) ಬೀಡಿ ಉದ್ಯಮತ್ತ್‌ಗ್ ಪರ್ಯಾಯ ಆಕ್‌ರೆ ಉದ್ಯಮತ್ತ್‌ಗ್ ತರಬೇತಿ ಕೇಂದ್ರತ್ತೆ ಏರ್ಪಾಡಾಕಿಟ್ಟ್ ತರಬೇತಿ ಕೊಡ್ತ್‌ಲ್ ಪಿನ್ನೆ ಅದ್‌ರೆ 'ಬ್ಯಾರಿ ಸಹಕಾರಿ ಸಂಘ' ಆಯಿಟ್ಟ್ ಬದಲಾವಣೆ ಆಕೊನು.

ಮಂಙಲ-ಕಾಸಿ :

1. ಕಾಸಿರೆ ತಕ್ಷಣ ನಿಪ್ಪಾಟೊನೂಂಟಾಯೆಂಗ್ ಪೆಣ್ಣ್ ಮಕ್ಕಲ ಮಂಙಲ್‌ತ್ತ್‌ಗ್ ಸಹಾಯ ಆಕ್‌ರೆ ಸಂಘಟನೆಙ ಆ ಸಹಾಯತ್ತೆ ತಕ್ಷಣ ನಿಪ್ಪಾಟೊನು. ಸಹಾಯತ್ತೆ ಪೇರ್‌ಲ್ ಒರು ಸಾಮಾಜಿಕ ಪಿಡುಗುಗ್ ಪರೋಕ್ಷ ಆಯಿಟ್ಟ್ ಈ ಸಂಘಟನೆಙ ಕಾರಣ ಆವುರು. ಪೆಣ್ಣ್ ಮಕ್ಕಳೆ ಮಂಙಲ್‌ತ್ತ್‌ಗ್ ಎನ್ನೆಯುಂ ಸಹಾಯ ಕಿಟ್ಟ್‌ಲ್ಲಾಂಟಾಂಬೊ ಕಾಸಿ

ಕೇಕ್‌ರಂಜಲೆ ಶಬ್ದ ಅಡಂಜ್‌ರ್.

2. ಆಡಂಬರತ್ತೆ ಮಂಜಿಲ ಆದಾಂಟ್ ಶಕ್ತ್ಯಾನುಸಾರ ಸರಳ ಮಂಜ್‌ಲ್ತ್‌ಗ್ ಏರ್ಪಾಡಾಕೊನು. ಪಜೇನತ್ತೆ ದುರುಪಯೋಗ, ಇಸ್ರಾಫ್ ಇದ್‌ಲ್ ನಿಪ್ಪಾಟೊನುಗಾವ್ರು.

3. ಸಾಮೂಹಿಕ ವಿವಾಹ ಏರ್ಪಾಡಾಕಿಟ್ಟ್ ಪಾವತ್ತೆ ಬ್ಯಾರಿ ಕುಟುಂಬತ್ತೆ ಸಂದೋಲತ್ತ್‌ಲ್ ಭಾಗಿ ಆವ್ವೊನು.

ಇದಲ್ಲಾತೆ ಸಲಹೆಜ :

1. ಕೂಡಲೇ ಒರು ಬ್ಯಾರಿ ಮಾಹಿತಿ ಕೇಂದ್ರ ಮೈಕಾಲ್ತ್ ಸ್ಥಾಪನೆ ಆಕೊನು. ಕ್ರಮೇಣ ಪ್ರತೀ ತಾಲೂಕುಲ್ ಮಾಹಿತಿ ಕೇಂದ್ರ ಸ್ಥಾಪನೆ ಆಕೊನು.

2. ಬ್ಯಾರಿಜಗಾಯಿಟ್ಟ್ ಉಚಿತ ಚಿಕಿತ್ಸಾ ಸೌಕರ್ಯ ಆಕೊನು. ಆರೋಗ್ಯತ್ತೆ ಬಗ್ಗೆ ಬ್ಯಾರಿಜ ಉಲ್ಲೊ ಪ್ರದೇಶತ್ತ್‌ಲ್ ಮಾಹಿತಿ ಕೊಡುಕೊನು.

3. ಸಾಹಿತ್ಯ ಸಮ್ಮೇಳತ್ತ್‌ಳ್ ಒಲಿಂಞ್ ಪೈಸತ್ತ್‌ಲ್ ಪಾವತ್ತೆಬ್ಯಾರಿ ಕುಟುಂಬತ್ತ್ಂಕ್ ಅಗ ಕೆಟ್ಟಿಟ್ಟ್ ಕೊಡ್ಕೊನು.

4. ~~(ಉಲಮಾಕ್ [illegible])~~ ಸಮುದಾಯತ್ತೆ ನಡುಲು ಸೌಹಾರ್ದ ಕೂಟ, ವಿಚಾರಗೋಷ್ಠಿ ಆಕಿಟ್ಟ್ ಗುಂಪುಗಾರಿಕೆ ಇಲ್ಲಾಂಟಾಕೊನು.

5. ~~(ಕೇರಳತ್ತ್ಂ ಬೇರೆ ರಾಜ್ಯತ್ತ್ಂ ಬಂದ)~~ ಸಾಂಸ್ಕೃತಿಕ ಅತಿಕ್ರಮಣತ್ತೆ ಇಲ್ಲಾಂಟಾಕೊನು.

## ಸಾಹಿತ್ಯ

"ಪಲಕ ಪಿನ್ನೆ ಪಲಕ ಪರಯಿಡೆವಂಡೆ ನಡುಲು ಒರು ವಿಶೇಷ ಪಲಕ ಸಂಪತ್ತ್‌ರೆ ಜೋಡಣೆ ಉಂಡಾಯಿಟ್ಟ್ ನೇರಾಯ ನೆಲೆಲ್ ಅಲ್ಲೆಂಗ್ ಬಿಯಾರತ್ತೆ ನೆಲೆಲ್ ಎಲ್ತ್‌ರೆ ರೂಪತ್ತ್‌ಗ್ ಬಂಡದೇ ಸಾಹಿತ್ಯ."

ವ್ಯಾಖ್ಯಾನ : ಒರು ಕಿಡಾವು ಪಲಕ ಪರಯೊನುಗು ತೊಡಂಜುಂಬೊಮೇ ಆ ಕಿಡಾವುಲ್ ಸಾಹಿತ್ಯ ಪ್ರಕಟ ಆವ್ರು. ಚೊನ್ನೆಂಗ್ ಪಲಕ ಎಪ್ಪ ತೊಡಂಜಿತ್ತಾ ಅಂಡ್ ಸಾಹಿತ್ಯ ತೊಡಂಜಿರ್. ಈ ಚೊಲ್ಲುಂ ತೆಲ್ಲ್ ಪಾರ್ತ್ತಾ ಎಂದಾ? ಒರು ಕಿಡಾವ್ರೆ ಕೈಕ್ ಒರು ಬಸ್ತ್ ಕೊಡ್ತೆಂಗ್ ಆ ಕಿಡಾವು ಅದ್‌ರೆ ಕಡಿಕ್‌ರ್, ಕೊಟ್ಟುರ್, ಒಡಕ್‌ರ್. ಅದ್‌ರೆ ಕೈರೆ ಬಲ್ಲೆಡ್ತೆಂಗ್ ಅದ್‌ಗಾಯಿಟ್ಟ್ ಕೇಟ್ಟ್ ಬುಲ್ಲು ಇಡ್ರ್. ಆ ಕಿಡಾವುಗು ಅಜನಲ್ಲ ಆಕೊನೂಂಟುಲ್ಲೆ ಉಲ್ಗತ್ತೆ ಪ್ರೇರಣೆ ಎಂಜನ ಕಿಟ್ಟಿತ್ತ್? ಅದೊರು ಗುಟ್ಟು. ಚೊನ್ನೆಂಗ್ ಪಲಕ ಪರ್ಕೈಡೆಕ್ ಮುನ್ನಲೇ ಆ ಕಿಡಾವು ಈ ಪ್ರಕೃತಿರೊಟ್ಟಿಗೆ ಸ್ಪಂದಿಸ್‌ರ್. ಪರ್ತ್‌ರೆ ದುನಿಯಾವುಗುಂ, ಉಲ್ಗತ್ತೆ ಬುದ್ದಿಗುಂ ನಡುಲ್ ನಡಕ್‌ರೆ ಉರುಪಿಡಿಲ್ ಗೆಂದಿಟ್ಟ್ ಬಂಡದೆ ಸಾಹಿತ್ಯ.

ಸಾಹಿತ್ಯ ಚೊನ್ನೆಂಗ್ 'ಒಟ್ಟಿಗೆ ಇಕ್ಕ್‌ರೆ' ಅಂಟ್ ಚೊಲ್ಲುರೆ ಅರ್ಥತ್ತೆ ನಡಿಲೆ ಭಾಷಾ ಪಂಡಿತಮ್ಮಾರ್ ಕೊಡ್ತುರಾರ್. ~~ಚೊನ್ನೆಂಗ್~~ ಸಾಹಿತ್ಯ ಚೊಮ್ಮ ಬಿಷಯ ಒಟ್ಟಿಗೆ ಉಲ್ಲೆ ಒರು ಕೂಟ. ಅದ್‌ಲ್ ವಿಜ್ಞಾನ, ತಂತ್ರಜ್ಞಾನ, ಧರ್ಮನೀತಿ, ಸಂಗೀತ, ಕೃಷಿ, ವಾಣಿಜ್ಯ, ಕಾನೂನು, ಚರಿತ್ರೆ ಎಲ್ಲತ್ತೆಯುಂ ತೆಲ್ಲ್ ತೆಲ್ಲ್ ಉಪಯೋಗ ಆಕೊನುಗಾವ್ರು. ಈ ಬಿಷಯತ್ತೆ ಎಲ್ಲ ಬೋಧಪ್ರದವುಂ, ಜನಪ್ರಿಯವುಂ, ಪ್ರಯೋಜನಕಾರಿಯುಂ ಆಕೊನೂಂಟಾಯೆಂಗ್ ರೋಚಕತ್ವತ್ತ್‌ಗುಂ ಮನೋರಂಜನೆಗುಂ ಒತ್ತು ಕೊಡುಕೊನಾವ್ರು. ರೋಚಕತ್ವತ್ತ್ ಬಿಯಾರತ್ತೆ ಸಹಾಯ ಬೇನು. ಅಪ್ಪ ಒರು ಸಾಹಿತ್ಯ ನೇರಾಯ ನೆಲೆಲ್ ಅಲ್ಲೆಂಗ್ ಬಿಯಾರತ್ತೆ ನೆಲೆಲ್ ಬೆಲ್ಚತ್ತ್‌ಗ್ ಬಂಡ್. ಇಜನ ಬೇರೆ ಬಿಯಾರತ್ತ್‌ಲ್ ಕೂಡಿಟ್ಟ್ ರೋಚಕ ಆಯಿಟ್ಟುಂ ಬೇರೆ ಬೇರೆ ಬಿಷಯತ್ತ್ ಪ್ರತಿಪಾದನೆಲ್ ಕೂಡಿಟ್ಟ್ ಬೋಧಪ್ರದವುಂ ಆಯಿಟ್ಟಿಕ್ಕ್‌ರೆ ಗ್ರಂಥತ್ತ್ 'ಸಾಹಿತ್ಯ'ಅಂಟ್ ಚೊಲ್ಲೊಗಾವ್ರು.

### ಸಾಹಿತ್ಯತ್ತ್‌ಲ್ ಪರಿಹಾರ ಸಾಧ್ಯಮಾ?

ಮನುಷ್ಯರೆ ಆರಂಭತ್ತ್‌ಲ್ ಪಿನ್ನತ್ತೆ ನಾಗರಿಕತೆಲ್ ಸುಸಂಸ್ಕೃತಿರೆ ಮೂನು ಹಂತತ್ತೆ ಕಾಣೊನುಗಾವ್ರು. ಚುತ್ಯೋಂಟು ಬಯರ್ ನೊರಟ್ಯೋಂಟನ್ನೆ ಮನಿಷ ವರ್ಗ ಕೃಷಿ ಆಕೊನುಗು ತೊಡಂಜಿಯದ್ ಒನ್ನಾಮತ್ತೆ ಹಂತ. ಅದ್ ಕಲ್ಲ್ಂಲ್ ಪಿನ್ನೆ ಯಂತ್ರ ಕಂಡ್ ಪಡಿಚ್ಚಿಟ್ಟ್ ಕೈಗಾರಿಕಾಕ್ರಾಂತಿ ಆಕಿಯದ್ ಜಂಡಾಮತ್ತೆ ಹಂತ. ಊಡ್ಲ್ ಪಿನ್ನೆ ಇಪ್ಪ ನಜ ಅನುಭವಿಸಿಯೋಟ್ಟಿಲ್ಲೆ ಕಂಪ್ಯೂಟರ್ ಟೆಲಿಕಮ್ಯುನಿಕೇಶನ್, ಪೋಲೋತೆ ಎಲೆಕ್ಟ್ರಾನಿಕ್ ಕಾಲವುಂ, ಅದ್ ನಿರ್ಮಾಣ ಆಕೆಯ ಆರ್ಥಿಕ, ಸಾಂಸ್ಕೃತಿಕ ವ್ಯವಸ್ಥೆ ಇದ್ ಮೂನಮತ್ತೆ ಹಂತ. ಆಯೆಂಗಾ, ಈ ಮೂನು ಹಂತತ್ತೆಯುಂ ಒಟ್ಟಿಗೆ ಆಕ್‌ರೆ ಒರು ಅದ್ಭುತ ಶಕ್ತಿ ಉಂಡು. ಅದ್‌ವೇ ಸಾಹಿತ್ಯ. ಚೊನ್ನೆಂಗ್, ಮನುಷ್ಯ ಸಮೂಹ ಓರೋರೇ ತರಂಗತ್ತ್‌ಗ್ ಸಿಕ್ಕಿಟ್ಟ್ ಬದಲಾಯೋಂಟಕ್ಕುಂಬೊತ್ತ್‌ಗಲ್ಲ ಸಾಹಿತ್ಯತ್ತೆ ಅಗತ್ಯತ್ತೆ ಮರನ್ನೋಂಟಲ್ಲಾಂತ್.

ಇಜನೆ ಅಲ್ಲನೆ ಆಕುಂಬೊ ಸಾಹಿತ್ಯತ್ತೆ ಜಂಡಾಯಿಟ್ಟ್ ಅಲ್ಲನೆ ಆಕಾ.

1. ಸೃಜನಾತ್ಮಕ ಸಾಹಿತ್ಯ ಅಲ್ಲೆಂಗ್ ಶುದ್ಧ ಸಾಹಿತ್ಯ.

2. ಜ್ಞಾನ ಸಾಹಿತ್ಯ ಅಲ್ಲೆಂಗ್ ವೈಜ್ಞಾನಿಕ ಸಾಹಿತ್ಯ.

ಒನ್ನು ಹೃದಯತ್ತ್‌ಗ್ ಸಂಬಂಧ ಪಟ್ಟೆದ್. ಇನ್ನೊನ್ನು ಬುದ್ಧಿಗ್ ಸಂಬಂಧ ಪಟ್ಟೆದ್. ಜಂಡುಂ ಒಟ್ಟೊಟ್ಟಿಗೆ ಬೆಲೆಯುಂಬೊ ಏದೊರು ಸಮುದಾಯತ್ತೆ ನಜ ವಿಕಾಸ ಆಕೊನೂಂಟು ಬಿಯಾರಿಕ್ಕಿರಾಮಾ ಅದ್ ಸಾಧ್ಯ ಆವು. ಭಾಷೆ ಪಿನ್ನೆ ಸಾಹಿತ್ಯ ಒರು ಸಂಕೀರ್ಣ ಬಿಸಯಯಾಯಿಟ್ಟೆಕ್ಕ್‌ರ್. ಎಂದೆ ಚೊನ್ನೆಂಗ್, ಅದ್ ಮನುಷ್ಯಗ್ ಸಂಬಂದ ಪಟ್ಟ್‌ರ್. ಮನುಷ್ಯಮೇ ಒರು ಸಂಕೀರ್ಣ ಜೀವಿಯಾಯಿಟ್ಟೆಕ್ಕ್‌ರ. ಭಾಷೆ ಪಿನ್ನೆ ಸಾಹಿತ್ಯತ್ತೆ ನಡುರೆ ಪರಸ್ಪರ ಸಂಬಂಧ ಎತ್ರೆ ಸಂಕೀರ್ಣ ಚೊನ್ನೆಂಗ್, ಎಲ್ಲುಂ ಓತುಂ ತೆರಿಯಾತವುನುಗುಂ ಭಾಷಂ ಸಾಹಿತ್ಯತ್ತ್‌ಲ್ ಪಿಡಿತ್ತ್ ಇಕ್ಕ್‌ರೊ ಸಾಧ್ಯತೆ ಉಂಡು. ಚೊನ್ನೆಂಗ್, ಒರರ್ಥತ್ತ್‌ಲ್ ಓತುಂ ಎಲ್ಲುಂ ಇಲ್ಲಾತವುನುಂ ಚೈಕೊನುಗಾವುರು. ಮನುಷ್ಯರ ಜೀವನತ್ತ್‌ಗ್ ಓತುಂ ಎಲ್ಲುಂ ಅನಿವಾರ್ಯ ಅಲ್ಲ. ಭಾಷೆಯುಂ ಸಾಹಿತ್ಯವುಂ ಅನಿವಾರ್ಯ. ಈ ಪಂಚಾಂಗತ್ತೆ ಮೇಲೆ ಇಂಡತ್ತೆ ಶ್ರವ್ಯ, ದೃಶ್ಯ ಸಾಹಿತ್ಯ ನಿಂಡ್‌ರ್ (ರೇಡಿಯೋ, ಟಿ.ವಿ.)

ಮೇಲ್‌ರೆ ಬಿಷಯತ್ತೆ ಜಾಗ್ರತೆಲ್ ಗಮನಿಸುಂಬೋ ಒರು ಅಪ್ಪುಲು ಓತು ಎಲ್ತ್ ತೆರಿರಪ್ಪುಗು ತಂಡೊ ಅಪುತು ಪಲಕ ಪರಯಿಡೆ ಭಾಷೆರೆ ಮುಖಾಂತರ ಒರು ನಲ್ಲೆ ಸಾಹಿತ್ಯತ್ತೆ ತಂಡ್ಲೊ ಕುಟುಂಬತ್ತ್‌ಗ್ ಎತ್ತ್‌ಪಾಟ. ಆ ಸಾಹಿತ್ಯ ಸೃಜನಾತ್ಮಕ ಆಯಿಟ್ಟೆಕ್ಕು, ವೈಜ್ಞಾನಿಕ ಆಯಿಟ್ಟೆಕ್ಕು. ಅನುಭವತ್ತೆ ಆಳ, ಸಮುದಾಯತ್ತೆ ಹಿತದೃಷ್ಟಿ, ಚೊನ್ನು ಕೊಡುಕೊನೂಂಟುಲ್ಲೆ ನಿಯತ್ತ್, ಒಟ್ಟುಗು ಕೂಡುಂಬೊ ಉಂಡಾವುಡೆ ಸಾಹಿತ್ಯತ್ತ್‌ಲ್ ಸಮುದಾಯತ್ತೆ ಸಮಸ್ಯೆಜಗ್ ಪರಿಹಾರ ಆವೊನು ಸಾಧ್ಯ.

ಒರು ಸಾಹಿತ್ಯ ಮೂನು ಬಟ್ಟ ಉಂಡಾವುರು. ಒರ್ಕ ಸಾಹಿತಿರೆ ಕೈಲ್, ಜಂಡಾಮದ್ ಓದ್‌ರೋಂಡೊ ತಲೆಲ್, ಮೂನಾಮದ್ ಕೇಕ್‌ರಜಲೊ ತಲೆಲ್. ಒಟ್ಟಾರೆ ಮನಿಷರೆ ಜೀವನತ್ತೆ ಮೇಲ್ ಸಾಹಿತ್ಯ ಚಮ್ಮೆ ತರತ್ತ್‌ಲ್ ತಂಡೊ ಪ್ರಭಾವ ಆಕಿಯೋಂಟುಂಡು. ಅದ್‌ಲಾಯಿಟ್ಟ್ ಮನುಷ್ಯರೆ ಜೀವನತ್ತೆ ಪರಿವರ್ತನೆ ಆಕ್‌ರೆ ಗುಣವುಂ ಸಾಹಿತ್ಯತ್ತ್‌ಗ್ ಉಂಡು.

ಆಯೆಂಗಾ, ಈ ಸಾಹಿತಿಜ ನೇರಾಯಿಟ್ಟು ಬ್ಯಾರಿ ಸಮುದಾಯತ್ತೆ ಪರಿವರ್ತನೆ ಬಯಸ್‌ರೆಂಗ್ ಆ ಸಾಹಿತಿರೆಜ ತಂಡೆ ಇರ್ಪ್ಪುತ್, ನಡತವಾಸಿ, ಚಾರಿತ್ರ್ಯ, ಪೇರ್, ಮನೋವೃತ್ತಿ ಎಲ್ಲಾ ದೃಷ್ಟಿಲುಂ ಪರಿಶುದ್ಧ ಆಯಿಟಕ್ಕೊನು.

ಬೆಲೆ ಪಿನ್ನೆ ನೆಲೆ : ಈ ಪ್ರಬಂಧತ್ತೆ ಬೆಲೆರಂ ನೆಲೆರಂ ಕುರ್‌ಆನ್‌ಲುಲ್ಲೆ ಒರು ಎಚ್ಚರಿಕೆರೆ ವಾಕ್ಯತ್ತ್‌ಲ್ ಗುರುತಿಸೊನುಗಾವುರು:

"...ಇನ್ನ್ ಕವಿಜ - ಅಜಲೆ ಪೆರಗ್‌ಲ್ ತೆರು ತಪ್ಪಿಯಜ ನಡನ್ನೋಂಟುಲ್ಲಾರ್. ಅಜ ಪ್ರತಿಯೊರು ಕಣಿಲ್ ಚುತ್ತೋಂಟುಲ್ಲೆದ್ ನಿಜ ಕಾಂಡಿಲ್ಲೇ? ಅಜ ಆಕಾತ್‌ದ್‌ರೆ ಪಲಕ ಪರಿಯಿಡಾರ್" (26:224-226)

ಇದ್‌ರೆ ಒಟ್ಟು ತಪ್ಪೀರ್ ಎಂದ್ರೇಂಟ್ ಚೊನ್ನೆಂಗ್ ಏದೊರು ಸಾಹಿತಿಗ್, ಏದೊರು ಕವಿಕ್ ಬಿಷಯತ್ತೆ ಆಲೋಚನೆ ಆಕಿಟ್ಟ್ ಚೊಲ್ಲೊಗು ಒರು ನಿಶ್ಚಿತ ಮಾರ್ಗ, ನಿರ್ಧಿಷ್ಟ ನೆಲೆ, ಪಿನ್ನೆ ಕೇಕುಂಬೋಲ್ತೆ ಒರು ಜನಾಂಗ ಇಲ್ಲೆಂಗ್ ಆ ಸಾಹಿತಿ ಅಲ್ಲೆಂಗ್ ಕವಿ ಲಂಗ್‌ಲಗಾಮಿಲ್ಲಾಂಟ್ ಚುತ್ತೋಂಟಿಕ್ಕ್‌ರ. ಅಯಾಳ್ ಬೇವಾತೆ ಬಿಷಯತ್ತೆ ಚೊನ್ನುಟ್ಟು ಒಟ್ಟಿಗೆ ಉಲ್ಲೆಂಜಲೆಯುಂ ಚುತ್ತುಪಾಟ್ರ್ ಪಿನ್ನೆ ಅಯಾಲ್ ಸ್ವಂತ ಆಕಾತ್‌ದ್‌ರಂ ಚೊನ್ನುಕಾಟ್ರ್.

ಸ್ವಂತ ಆಕ್‌ಡೆದುಂ, ಬಾಕಿ ಉಲ್ಲೆಜಗ್ ಆಕೊನುಗು ಸಾಧ್ಯ ಆವುಡೆ ಪೋಲೋತೆದುಂ ಚೊನ್ನು ಕೊಡುಕುರೆ ಸಾಹಿತಿ, ಅಲ್ಲೆಂಗ್ ಕವಿ ಅಂಜಲೆ ಸಿದ್ಧಾಂತತ್ತ್‌ಗ್ ಪತ್ತಿ ಪಿಡಿಚ್ಚಿಟ್ಟೆಕ್ಕ್‌ರಾರ್.

ಸಾಹಿತ್ಯತ್ತೆ ಬೆಲೆವುಂ, ಸಾಹಿತ್ಯತ್ತೆ ನೆಲೆಯುಂ ಇದುವೇ ಆಯಿಟ್ಟೆಕ್ರ್.

ಇಜಂತೆ ಸಾಹಿತ್ಯ ನಜಲೆ ಸಮುದಾಯತ್ತೆ ಆಶೋತ್ತರತ್ತ್‌ಗ್ ಸ್ಪಂದಿಸೊಗು ಸಾಧ್ಯ.

ಅಲ್ಲಾಹು ಕಿರ್ಫಕಾಟಟ್ಟ್ - ಆಮೀನ್

# ಪರಿಚಯ

**ಶೈಕ್ಷಣಿಕ ಮಾಹಿತಿ :**

ಹೆಸರು : ಡಾ: ಬಿ. ಅಬ್ದುಲ್ ರಹಿಮಾನ್

ವಯಸ್ಸು : 51 ವರ್ಷಗಳು

ಪ್ರಸಕ್ತ ಕಾರ್ಯಭಾರ : ಅಧ್ಯಕ್ಷ ಹಾಗೂ ಪ್ರಾಧ್ಯಾಪಕ, ಜೀವವಿಜ್ಞಾನ ವಿಭಾಗ
ಡೀನ್ ವಿಜ್ಞಾನ ನಿಕಾಯ
ಕುವೆಂಪು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿ ಹಾಗೂ ಸೆನೆಟ್ ಸಭೆಯ ಸದಸ್ಯ,

**ಶೈಕ್ಷಣಿಕ ದಾಖಲೆಗಳು :**

ಪಿಹೆಚ್.ಡಿ., 1983 , ಮೈಸೂರು ವಿಶ್ವವಿದ್ಯಾನಿಲಯ

ಎಂ . ಎಸ್‌ಸಿ., 1973, ಮೂರನೇ ರ್‍ಯಾಂಕು, ಮೈಸೂರು ವಿಶ್ವವಿದ್ಯಾನಿಲಯ

ಬಿ. ಎಸ್‌ಸಿ., 1971, ಪ್ರಥಮ ದರ್ಜೆ

ಎಸ್. ಎಸ್. ಎಲ್. ಸಿ., 1967, ಪ್ರಥಮ ದರ್ಜೆ

**ವೃತ್ತಿಪರ ಅನುಭವಗಳು :**

**ಸಂಶೋಧನೆ** : 1973 ರಿಂದ **ಕೌನ್ಸಿಲ್ ಆಫ್ ಸೈಂಟಿಫಿಕ್ ಆಂಡ್ ಇಂಡಸ್ಟ್ರಿಯಲ್ ರಿಸರ್ಚ್ (C.S.I.R.), ನವ ದೆಹಲಿಯ** ಸಂಶೋಧನಾ ವಿದ್ಯಾರ್ಥಿ ವೇತನದೊಂದಿಗೆ ಪ್ರಾರಂಭ.

**ಭೋದನೆ** : 23 ವರ್ಷಗಳಿಗಿಂತಲೂ ಹೆಚ್ಚಿನ ಭೋದನಾ ಅನುಭವ. 1976 ರಲ್ಲಿ ಸೆಂಟ್ ಅಲೋಸಿಯಸ್ ಕಾಲೇಜು ಮಂಗಳೂರಿನಲ್ಲಿ ಪ್ರಾಣಿಶಾಸ್ತ್ರ ಉಪನ್ಯಾಸಕನಾಗಿ ಪ್ರಾರಂಭ.
1977 ರಿಂದ 1986 ರವರೆಗೆ ಸ್ನಾತಕೋತ್ತರ ಜೀವ ವಿಜ್ಞಾನ ವಿಭಾಗ ಮಂಗಳೂರಿನಲ್ಲಿ ಉಪನ್ಯಾಸಕನಾಗಿ ಸೇವೆ.
1986 ರಿಂದ 1995 ರವರೆಗೆ ಜೀವ ವಿಜ್ಞಾನ ವಿಭಾಗ ಮಂಗಳೂರಿನಲ್ಲಿ ಪ್ರವಾಚಕನಾಗಿ ಸೇವೆ.
1995 ರಿಂದ ಈ ವರೆಗೆ ಜೀವ ವಿಜ್ಞಾನ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟದಲ್ಲಿ ಪ್ರಾಧ್ಯಾಪಕನಾಗಿ ಸೇವೆ.

**ಸಂಶೋಧನಾ ಮಾರ್ಗದರ್ಶನ** : 6 ಎಂ. ಫಿಲ್. ಅಭ್ಯರ್ಥಿಗಳಿಗೆ ಮಾರ್ಗದರ್ಶನ ಪೂರೈಸಿ, 5 ಪಿಹೆಚ್. ಡಿ. ಅಭ್ಯರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಲಿದ್ದೇನೆ.

**ಪ್ರಾಜೆಕ್ಟ್** : 3 ಸಂಶೋಧನಾ ಪ್ರಾಜೆಕ್ಟ್‌ಗಳನ್ನು ( ರೂ. ಒಂದು ಲಕ್ಷ ಐವತ್ತು ಸಾವಿರ ಧನ ಸಹಾಯದೊಂದಿಗೆ) ಪೂರೈಸಿದ್ದೇನೆ.

DR ABDUL RAHIMAN BANTWAL
M.Sc. Phd.
Professor & chairman
Dept. of Life Science
Kuvempu University
SHANKARAGHATTA - 577451

Ph: ~~0824~~
08282 57191 (R)
08282 37235 (O).

**ಚಟುವಟಿಕೆಗಳು** : 1993 ರಲ್ಲಿ ಜೈವಿಕ ವಿಜ್ಞಾನ ವಿಭಾಗ , ಮಂಗಳೂರು ವಿಶ್ವವಿದ್ಯಾನಿಲಯ ಪುನರ್ ನವೀಕರಣ **( Refresher Course )** ವನ್ನು ಸಂಯೋಜಿಸಿದ್ದೇನೆ.

1996 ರಲ್ಲಿ ಜೀವ ವಿಜ್ಞಾನ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯದ ವತಿಯಿಂದ **ಔಷಧೀಯ ಸಸ್ಯಗಳು** ಎಂಬ ಕಾರ್ಯಗಾರವನ್ನು, 1999 ರಲ್ಲಿ **ವಾಣಿಜ್ಯ ಪುಷ್ಪ ಕೃಷಿ** ಎಂಬ ಕಾರ್ಯಗಾರವನ್ನು ಸಂಯೋಜಿಸಿದ್ದೇನೆ.

**ಐಚ್ಛಿಕ ಸಂಶೋಧನೆ : ಪಶ್ಚಿಮ ಘಟ್ಟದ ಜೀವ ವೈವಿಧ್ಯತೆ** ಹಾಗೂ **ಕಾಡು ಮೆಣಸಿನ ಜೀವ ತಾಂತ್ರಿಕ ಅಧ್ಯಯನ.**

**ಹೆಚ್ಚುವರಿ ಕಾರ್ಯಭಾರ** : ಸ್ನಾತಕೋತ್ತರ ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗ , ಕುವೆಂಪು ವಿಶ್ವವಿದ್ಯಾನಿಲಯದಲ್ಲಿ **BOS** ಮತ್ತು **DOS** ಅಧ್ಯಕ್ಷನಾಗಿ ಸೇವೆ (1995 - 1998) ಹಾಗೂ ಜೈವಿಕ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿ **BOS** ಸದಸ್ಯನಾಗಿ ಸೇವೆ.

ಸ್ನಾತಕೋತ್ತರ ಸಸ್ಯಶಾಸ್ತ್ರ ವಿಭಾಗ, ಕಣ್ಣಾನೂರು ವಿಶ್ವವಿದ್ಯಾನಿಲಯ, ಜೈವಿಕ ವಿಜ್ಞಾನ ವಿಭಾಗ ಮತ್ತು ಅನ್ವಯಿಕ ಸಸ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಜೈವಿಕ ವಿಜ್ಞಾನ ವಿಭಾಗ(ಹಾಸನ) , ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಕುವೆಂಪು ವಿಶ್ವವಿದ್ಯಾನಿಲಯದ ಸೂಕ್ಷ್ಮಜೀವಾಣು ಶಾಸ್ತ್ರ ಮತ್ತು ಅನ್ವಯಿಕ ಪ್ರಾಣಿಶಾಸ್ತ್ರ ಇವುಗಳಲ್ಲಿ **BOE** ಸದಸ್ಯನಾಗಿ ಸೇವೆ.

**ಸಂಶೋಧನಾ ಪ್ರಕಟಣೆ** : 18 ಸಂಶೋಧನಾ ಪ್ರಬಂಧಗಳನ್ನು ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪ್ರಕಟಿಸಿದ್ದೇನೆ.

**ಇತರ ಚಟುವಟಿಕೆಗಳು** : ನುರಿತ ಚಿತ್ರಕಾಲಾವಿದನಾಗಿ ವಿವಿಧ ಪ್ರದೇಶಗಳಲ್ಲಿ ನನ್ನ ಕಲೆಯನ್ನು ಪ್ರದರ್ಶಿಸಿದ್ದೇನೆ ಹಾಗೂ **ಕರ್ನಾಟಕ ಲಲಿತಾಕಲಾ ಅಕಾಡೆಮಿಯ** ಚಿತ್ರಗಾರರ ಗೋಷ್ಠಿಯಲ್ಲಿ ರಾಜ್ಯಮಟ್ಟದ ಕಲಾವಿಧನಾಗಿ ಭಾಗವಹಿಸಿದ್ದೇನೆ.

**ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನೌಕರರ ಸಹಕಾರ ಸಂಘದ ನಿರ್ದೇಶಕನಾಗಿ** ಸೇವೆ ಸಲ್ಲಿಸಿದ್ದೇನೆ.

ಮಂಗಳೂರಿನ ವಿದ್ಯಾರ್ಥಿನಿ ನಿಲಯದ **ಶಿಕ್ಷಕಸಲಹೆಗಾರ ( warden)** ನಾಗಿ 3 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದೇನೆ.

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ **ಶಿಕ್ಷಕರ ಸಂಘದಲ್ಲಿ ಅಧ್ಯಕ್ಷರಾಗಿ** (ಎರಡು ಅವಧಿಗಳು ) **ಕಾರ್ಯದರ್ಶಿ, ಖಜಾಂಚಿ** ಹಾಗೂ **ಸಹಕಾರ್ಯದರ್ಶಿಯಾಗಿ** ಸೇವೆ ಸಲ್ಲಿಸಿದ್ದೇನೆ.

**ಕರ್ನಾಟಕ ವಿಶ್ವವಿದ್ಯಾನಿಲಯಗಳ ಶಿಕ್ಷಕರ ಒಕ್ಕೂಟದ ಸಹಕಾರ್ಯದರ್ಶಿಯಾಗಿ** ಸೇವೆ ಸಲ್ಲಿಸಿದ್ದೇನೆ.

ಕುವೆಂಪು ವಿಶ್ವವಿದ್ಯಾನಿಲಯದ **ಶಿಕ್ಷಕರ ಸಂಘದಲ್ಲಿ ಉಪಾಧ್ಯಕ್ಷನಾಗಿ** ಸೇವೆ ಸಲ್ಲಿಸಿದ್ದೇನೆ .

ಕಾಲೇಜು ವ್ಯಾಸಂಗದ ಸಮಯದಲ್ಲಿ ಕಬಡ್ಡಿ, ವಾಲಿಬಾಲ್(ಕೇಪ್ಟನ್) ಮತ್ತು ಇತರ ಆಟೋಟ ಸ್ಪರ್ದೆಗಳಲ್ಲಿ ಸಕ್ರಿಯವಾಗಿ ಭಾಗದಹಿಸಿದ್ದಲ್ಲದೆ, **NCC** ಯಲ್ಲಿಯೂ **'C'** ಸರ್ಟಿಫಿಕೇಟನ್ನು ಪಡೆದುಕೊಂಡಿರುತ್ತೇನೆ.

* * * * *

ಚಿತ್ರಕಲಾ ಕಲಾವಿದನಾಗಿ ಮಂಗಳೂರು, ಉಡುಪಿ, ಪುತ್ತೂರು ಮತ್ತು ಬೆಂಗ್ಳೂರ್ ಗಳಲ್ಲಿ ಏಕ ವ್ಯಕ್ತಿ ಕಲಾ ಪ್ರದರ್ಶನಗಳನ್ನು ಏರ್ಪಡಿಸಿದ್ದಲ್ಲದೆ ಮಡಿಕೇರಿಯಲ್ಲಿ ನಡೆದ ರಾಜ್ಯಮಟ್ಟದ ಕಲಾವಿಧರ ಶಿಬಿರದಲ್ಲಿ (ಕರ್ನಾಟಕ ಲಲಿತಕಲಾ [illegible]

# CURRICULUM VITAE

| | |
|---|---|
| Name | **Dr. B. ABDUL RAHIMAN, M.Sc., Ph.D.** |
| Date of Birth | 11th May 1948 |
| Place of Birth | Bantwal, Karnataka State, India |
| Present Position | Dean, Faculty of Science & Technology.<br>Professor and Chairman<br>Department of Life Science<br>Kuvempu University<br>Shankaragatta-577 451, Karnataka |

## SCHOLASTIC RECORDS :

- Ph.D., 1983 Botany, University of Mysore
  Title of the Thesis: Biosystematic studies in the genus *Piper* occurring in Karnataka region.
- M.Sc., 1973 Bioscience, University of Mysore, First Class III Rank
- B.Sc., 1971 St. Aloysius College, Mangalore. First Class. Optionals BZC
- S.S.L.C., 1967 I Class.

## PROFESSIONAL EXPERIENCE:

| | |
|---|---|
| Research | Since 1973 - Started as Junior Research Fellow of Council of Scientific and Industrial Research ( New Delhi), at Central Plantation Crops Research Institute, Regional Station, Vittal, Karnataka |
| Teaching | More than 23 years - Started as Lecturer at St. Aloysius College, Mangalore during July 1976. |